ಶ್ರೀ ಎಂ. ನಾಗಪ್ಪ.—ನೂಟ್ಸ್ ಎಂದು ಹೇಳಿದ್ದೀರಿ? ಇವು ಸಿವಿಲ್ ನೂಟ್ಸ್‌ಗಳೇ ಇಲ್ಲವೇ ಕ್ರಿಮಿನಲ್ ನೂಟ್ಸ್‌ಗಳೇ ತಿಳಿಸುತ್ತೀರಾ ಮತ್ತು ಉಗ್ರ ಕ್ರಮ ತೆಗೆದುಕೊಳ್ಳಲಾಗಿದೆ ಎಂದರೆ ಯಾವ ರೀತಿ ಕ್ರಮ ತೆಗೆದುಕೊಳ್ಳಲಾಗಿದೆ ಹೇಳುತ್ತೀರಾ?

ಶ್ರೀ ಆಲೂರು ಹನುಮಂತಪ್ಪ.—ಇವೆಲ್ಲಾ ಕ್ರಿಮಿನಲ್ ಕೇಸುಗಳು. ಇವು ಕ್ರಿಮಿನಲ್ ಪ್ರೊಸೀಜರು ಕೋಡು ಪ್ರಕಾರ ಆದ ಕೇಸುಗಳು. ನಿಯಮದಂತೆ ತಕ್ಕ ಕ್ರಮ ತೆಗೆದುಕೊಳ್ಳುತ್ತಾರೆ.

Lists of Elected Members of Village Panchayats

171. Sri S. H. PUTTARANGANATH (Belur).—

Will the Minister for Development be pleased to state :—

(*a*) whether the Government is maintaining the list of elected members of Village Panchayats, Taluk Boards and Municipal Councils belonging to Scheduled Castes and Tribes ;

(*b*) whether there is a proposal before the Government to compile such lists and place it on the Table of the House for the information of the members ;

(*c*) the number of members elected to the above Bodies, other than to the reserved seats, belonging to Scheduled Castes and Tribes ?

Sri B. L. GOWDA (Deputy Minister for Co-operation).—

(*a*) The Government are not maintaining such lists.

(*b*) No.

(*c*) Such information is not also maintained. However, if the member so desires it will be obtained and furnished to him.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಇಲ್ಲಿ ಪಟ್ಟಿಗಳನ್ನು ಇಡುತ್ತಿಲ್ಲ ಎಂದು ಹೇಳಿದರೆ ಸರಕಾರ ಈ ಸಭೆಗೆ ಉತ್ತರ ಕೊಡುವಾಗ ಮಿಸ್‌ಲೀಡ್ ಮಾಡುತ್ತಾರೆ ಎಂದು ಅರ್ಥ ಮಾಡಿಕೊಳ್ಳೋಣವೇ?

† ಶ್ರೀ ಬಿ. ಎಲ್. ಗೌಡ.—ಸರಕಾರದವರು ಪಟ್ಟಿ ಇಟ್ಟಿಲ್ಲ. ಆದರೆ ಪಂಚಾಯಿತಿಗಳಲ್ಲಿ ಹಾಗೂ ತಾಲ್ಲೂಕು ಬೋರ್ಡ್‌ಗಳಲ್ಲಿ ಮತ್ತು ಬಿಲ್ಲೆಗಳಲ್ಲಿರುವ ಡೆಪ್ಯುಟಿ ಕಮಿಷನರುಗಳು ಈ ಪಟ್ಟಿಗಳನ್ನು ಮಾಡಿರುತ್ತಾರೆ. ಇಂತಹ ಪಟ್ಟಿಗಳು ಬೇಕಾದರೆ ಅವರಿಂದ ತರಿಸಿಕೊಡಬಹುದು.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಉತ್ತರ (ಸಿ) ನಲ್ಲಿ ಹೀಗೆ ಇದೆ :

"Such information is not also maintained. However, if the member so desires it will be obtained and furnished to him"

ಎಂದರೆ ನಾನು ಕೇಳಿಲ್ಲ ಅದರಿಂದ ನನಗೆ ಕೊಡಬೇಕಾಗಿಲ್ಲ ಎಂದು ಅರ್ಥ ಮಾಡೋಣವೇ?

ಶ್ರೀ ಬಿ. ಎಲ್. ಗೌಡ.—ಸರಕಾರದವರು ಇಂತಹ ಒಂದು ಪಟ್ಟಿಯನ್ನು ಕ್ರೋಢೀಕರಿಸಿ ಮಾಡಿಟ್ಟಿಲ್ಲ. ಮಾನ್ಯ ಸದಸ್ಯರಿಗೆ ಬೇಕಾದರೆ ತರಿಸಿಕೊಡಬಹುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹರಿಜನರ ಹಾಗೂ ಗಿರಿಜನರ ಮೀಸಲು ಸ್ಥಾನಗಳನ್ನು ಹತ್ತು ಹತ್ತು ವರ್ಷಕ್ಕೊಂದು ಸಾರಿ ನಮ್ಮ ಮುಂದೆ ಇಡಬೇಕೆಂದು ಬರುತ್ತಿರುವುದರಿಂದ ಇಂತಹ

ಒಂದು ಪಟ್ಟಿಯನ್ನು ತಯಾರು ಮಾಡಿ ಸರಕಾರ ಇಡಬೇಕಾದುದು ಅಗತ್ಯ. ಆದುದರಿಂದ ಈಗಿನಿಂದ ಲಾದರೂ ಸರಕಾರದವರು ಇಂತಹ ಒಂದು ಪಟ್ಟಿಯನ್ನು ಮಾಡಲು ಕ್ರಮ ಕೈಗೊಳ್ಳುತ್ತಾರೆಯೇ?

ಶ್ರೀ ಬಿ. ಎಲ್. ಗೌಡ.—ಈಗಾಗಲೇ ಡೆಪ್ಯೂಟಿ ಕಮಿಷನರ ಕಡೆಯಲ್ಲಿ ಇಂತಹ ವಿವರಗಳಿರುವ ಪಟ್ಟಿಗಳಿವೆ. ಇವನ್ನು ಅವರಿಂದ ತರಿಸಿಕೊಂಡು ಮಾಡಬೇಕಾಗುತ್ತದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ರಾಜ್ಯಾಂಗದ ಪ್ರಕಾರ ಇಂತಹ ಮೀಸಲು ಸ್ಥಾನಗಳ ಪಟ್ಟಿಯನ್ನು ಮಾಡುವುದು ಸರಕಾರದ ಕರ್ತವ್ಯವಾಗಿದೆ. ಪಂಚಾಯಿತಿಗಳಲ್ಲಿರುವ ಹಾಗೂ ತಾಲ್ಲೂಕು ಬೋರ್ಡುಗಳಲ್ಲಿರುವ ಮೀಸಲು ಸ್ಥಾನಗಳ ಪಟ್ಟಿಯಂತೆ ಚುನಾವಣೆಗಳನ್ನು ಮಾಡುವಾಗ ಸಂಖ್ಯಾ ಬಲದಿಂದ ಮಾಡಬೇಕಾಗಿದೆ. ಇದಕ್ಕನುಕೂಲವಾಗುವಂತೆ ಸರಕಾರ ಇಂತಹ ಪಟ್ಟಿಗಳನ್ನು ತಯಾರಿಸಲು ಪ್ರಯತ್ನ ಮಾಡುತ್ತಾರೆಯೇ?

ಶ್ರೀ ಬಿ. ಎಲ್. ಗೌಡ.—ಸರಕಾರದಲ್ಲಿ ಇಂತಹ ಪಟ್ಟಿ ಮಾಡಿಲ್ಲ. ಎಲ್ಲ ಕಡೆ ಇರುವ ಪಂಚಾಯಿತಿಗಳಲ್ಲಿ ಹಾಗೂ ತಾಲ್ಲೂಕು ಬೋರ್ಡಗಳಲ್ಲಿ ಇಂತಹ ಅಂಕೆ ಅಂಶಗಳು ಇರುವ ಪಟ್ಟಿಗಳಿವೆ. ಇದನ್ನು ಕ್ರೋಡೀಕರಿಸಿ ಪಟ್ಟಿ ತಯಾರು ಮಾಡಬೇಕಾಗಿದೆ.

ಶ್ರೀ ಹೆಚ್. ಬಿ. ಪ್ಯಾಲನಯ್ಯ.—ಇಂತಹ ಷೆಡ್ಯೂಲ್ ಕ್ಯಾಸ್ಟ್ ಹಾಗೂ ಟ್ರೈಬ್ಸ್‌ಗಳ ಪಂಗಡದ ಸಮಿತಿಯ ಸದಸ್ಯರುಗಳ ಹೆಸರನ್ನು ಗೆಜೆಟ್ಟಿನಲ್ಲಿ ಪ್ರಕಟ ಮಾಡುತ್ತಿಲ್ಲವೆ?

ಶ್ರೀ ಬಿ. ಎಲ್. ಗೌಡ.—ಪ್ರಕಟಿಸಲಾಗುತ್ತಿದೆ.

Construction of Bunds in Handadi Village

180. Sri S. JAYAPRAKASH SHETTY (Brahmavar).—

Will the Minister of State for Minor Irrigation be pleased to state:—

(*a*) whether it has come to the notice of Government that hundreds of acres of cultivable land in Dugganakat e of Handadi village, Udipi taluk has submerged due to floods of Seetha river during rainy season;

(*b*) the difficulties in the way of Government in not implementing the request made by the villagers for construction of small bunds, costing about fifty thousand rupees only?

Smt. BASAVARAJESHWARI (Deputy Minister for Social Welfare) [On behalf of SRI A. J. DODDAMETI (Minister of State for Minor Irrigation)].—

(*a*) Yes. About 4 acres of land.

(*b*) It is not possible to avert the said difficulties by constructing small bunds. The matter is being examined by the Mysore Engineering Research Station in solving the difficulties caused to the adjacent lands by floods of Seetha river.

The question of averting the trouble caused to neighbouring lands by the floods of Seetha river is being considered by the Mysore Technical Research Centre.

ಶ್ರೀ ಎಸ್. ಜಯಪ್ರಕಾಶ ಶೆಟ್ಟಿ.- ನಾಲ್ಕು ಎಕರೆ ಭೂಮಿ ಎಂದು ಹೇಳುವುದು ಸತ್ಯಕ್ಕೆ ದೂರವಾದ ಅಂಶವಾಗಿದೆ. ಇದರ ಬಗ್ಗೆ ಸರಕಾರ ಏನು ಹೇಳುತ್ತದೆ?